**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1357/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಬಸವರಾಜು** | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಚಿನ್ನಮರಿಗೌಡ | ಚಾಸಾಃ 1 |
| ವಯಸ್ಸು | | 60 ವರ್ಷ | |
| ಕೆಲಸ | | ಕೂಲಿ | ಸಾ ಪ್ರ ಬೋ |
| ವಾಸ | | ಹನಿಯಂಬಳ್ಳಿ | ದಿಃ 04/06/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ-4 ನನ್ನ ಹೆಂಡತಿ. ಚಾಸಾ 2 ಮತ್ತು 3 ಗೊತ್ತು. ಚಾಸಾ 6 ನನ್ನ ಮಗ. ಚಾಸಾ 5 ನನ್ನ ಅಣ್ಣನ ಮಗ. ದಿಃ 16.06.2015 ರಂದು ಬೆಳಿಗ್ಗೆ 7 ಗಂಟೆಗೆ ಹನಿಯಂಬಳ್ಳಿ ಗ್ರಾಮದ ನನ್ನ ನಿವೇಶನಕ್ಕೆ ಬಚ್ಚಲುಮನೆಯ ನೀರನ್ನು ಆರೋಪಿತರು ಬಿಡುತ್ತಿದ್ದು, ಬಚ್ಚಲುಮನೆಯ ನೀರನ್ನು ಬೀಡಬೇಡಿ ಎಂದು ಹೇಳಿದ್ದಕ್ಕೆ ಆರೋಪಿತರು ನನಗೆ ಬೋಳಿಮಗನೇ ಸೂಳೇಮಗನೇ ಎಂದು ಬೈದು ಕೈಗಳಿಂದ ಹೊಡೆದು, ಕಾಲಿನಿಂದ ಒದ್ದರು. ನನ್ನ ಹೆಂಡತಿ ಚಾಸಾ 4 ರವರು ಬಂದಾಗ 1 ನೇ ಆರೋಪಿಯು ಚಾಸಾ 4 ರವರನ್ನು ಹಿಡಿದುಕೊಂಡಿದ್ದು ಉಳಿದ ಆರೋಪಿತರು ನನ್ನ ಹೆಂಡತಿಯನ್ನು ಕೈಗಳಿಂದ ಹೊಡೆದಿರುತ್ತಾರೆ. 1 ಮತ್ತು 4 ನೇ ಆರೋಪಿತರು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ಚಾಸಾ 2 ಮತ್ತು 3 ಬಂದು ಗಲಾಟೆ ಬಿಡಿಸಿರುತ್ತಾರೆ. ಅದೇ ದಿನ ನಾನು ಆಸ್ಪತ್ರೆಗೆ ದಾಖಲು ಆಗಿರುತ್ತೇನೆ. ಮಾರನೇ ದಿನ ಪೊಲೀಸರು ನಾನು ಆಸ್ಪತ್ರೆಯಲ್ಲಿ ಇದ್ದಾಗ ಬಂದು ನನ್ನ ದೂರು ಹೇಳಿಕೆಯನ್ನು ಪಡೆದಿರುತ್ತಾರೆ. ನಾನು ಆಸ್ಪತ್ರೆಯಿಂದ ಮನೆಗೆ ಬಂದ ಮಾರನೇ ದಿನ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಾಗ ನಾನು ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತೇನೆ. ಮಹಜರ್ ಜರುಗಿಸುವ ಕಾಲಕ್ಕೆ ಚಾಸಾ 2 ಮತ್ತು 3 ರವರು ಹಾಜರು ಇದ್ದರು. ಮಹಜರ್ ಮಾಡಿದಾಗ ಸಮಯ ಬೆಳಿಗ್ಗೆ 11 ಗಂಟೆ ಆಗಿತ್ತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ಮತ್ತು 4 ನೇ ಆರೋಪಿತರು

ಗೈರುಹಾಜರು ಇದ್ದು, ಅವರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ದೂರಾಗಿದ್ದು, ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲಾತಿ ತೋರಿಸಿದ್ದು ಅದು ಸ್ಥಳ ಪಂಚನಾಮೆ ಯಾಗಿದ್ದು, ಸ್ಥಳ ಪಂಚನಾಮೆ ಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸ್ಥಳ ಪಂಚನಾಮೆ ಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರಾಜ್ಞ ಆರೋಪಿತರ ಪರ ವಕೀಲರಿಂದಃ**

ಖಾಲಿ ನಿವೇಶನದ ವಿಚಾರವಾಗಿ ನನ್ನ ಮತ್ತು 1 ನೇ ಆರೋಪಿಯ ನಡುವೆ ಸಿವಿಲ್ ದಾವೆ ನಡೆಯುತ್ತಿತ್ತು ಎಂದರೆ ಸರಿ. ವಿಚಾರಣಾ ನ್ಯಾಯಾಲಯದಲ್ಲಿ ದಾವೆ 1 ನೇ ಆರೋಪಿ ಪರವಾಗಿ ತೀರ್ಮಾನವಾಗಿರುತ್ತದೆ. ಅದರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೆ. ಮೇಲ್ಮನವಿ ನನ್ನ ಪರವಾಗಿ ತೀರ್ಮಾನ ಆಗಿರುತ್ತದೆ. ಅದರ ವಿರುದ್ಧ 1 ನೇ ಆರೋಪಿ ಘನ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದಾರೆ. ಈ ದೂರು ನೀಡಿದಾಗ ಅಪೀಲು ಘನ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇತ್ತು. ದೂರನ್ನು ನಾನು ಆಸ್ಪತ್ರೆಯಲ್ಲಿ ಮೌಖಿಕವಾಗಿ ಹೇಳಿಕೆ ನೀಡಿರುತ್ತೇನೆ. ದೂರನ್ನು ನಾನು ಓದಿಲ್ಲ. ಸಾಕ್ಷಿ ಮುಂದುವರೆದು ನಾನು ಹೇಳಿದಂತೆ ಬರೆದುಕೊಂಡಿರುತ್ತಾರೆ. ಸಿವಿಲ್ ವ್ಯಾಜ್ಯ ಇದ್ದುದರಿಂದ ಯಾವುದೇ ಗಲಾಟೆಯಾಗದಿದ್ದರು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯಾಗುವಾಗ ಚಾಸಾ 2 ಮತ್ತು 3 ಇದ್ದರು. ಗಲಾಟೆಯಾಗುವಾಗ ಚಾಸಾ 2 ಮತ್ತು 3 ಇದ್ದರು ಎಂದು ದೂರಿನಲ್ಲಿ ಹೇಳಿದ್ದೇನೆ. ಆರೋಪಿತರು ನನಗೆ ಮತ್ತು ನನ್ನ ಹೆಂಡತಿ ಮೇಲೆ ಯಾವುದೇ ಗಲಾಟೆ ಮಾಡಿಲ್ಲ, ನನಗೆ ಬೈದಿಲ್ಲ ಮತ್ತು ಹೊಡೆದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಚಾಸಾ 6 ಸ್ಕೂಟರ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿ 3 ದಿನ ಇದ್ದೆ. ಮಹಜರ್ ಅನ್ನು ಗಲಾಟೆಯಾದ 3 ದಿನ ನಂತರ ಮಾಡಿರುತ್ತಾರೆ. ಮಹಜರ್ ಆದ ನಂತರ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ನನ್ನ ಹೆಂಡತಿಯ ತಾಳಿಯು ನಂತರದಲ್ಲಿ ಸಿಕ್ಕಿರುತ್ತದೆ. ತಾಳಿ ಸಿಕ್ಕಿರುತ್ತದೆ ಎಂದು ಪೊಲೀಸರಿಗೆ ಹೇಳಿಲ್ಲ. ಆರೋಪಿತರ ವಿರುದ್ಧದ ದ್ವೇಷದಿಂದಾಗಿ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**